# ಅಧ್ಯಾಯ 22

ಓಂ ಗಣೇಶಾಯ ನಮಃ     ಸದ್ಗುರು ಸಿದ್ಧಾರೂಢ ನಮಃ



| ಛಂದ |ನಿತ್ಯಶುದ್ಧನು ನಿರ್ವಿಕಾರನು ಸಗುಣರೂಪಿಂದೀತನು!
ಸತ್ಯಸದ್ಗುರು ಭಕ್ತಜನರ ದಯಾಳು ಕರುಣಾವಂತನು|
ಉತ್ಸವದ ಕಾಲದಲಿ ಪೂಜೆಯ ಗೈವರಿಚ್ಛೆಯ ನೀವುತ
ಸತ್ಸಭಾಸ್ಥಾನದಲ್ಲಿ ಸದ್ಗುರು ಪ್ರಕಟನಾದನು ಒಲಿಯುತ...

ಶ್ರೀ ಸದ್ಗುರುರಾಯನ ವಚನವನ್ನು ಶ್ರವಣ ಮಾಡಿದ ಮಾತ್ರದಿಂದ ಆತನು ತತ್ಕಾಲ ಮುಕ್ತಿಯನ್ನು ಕೊಡುವನು; ಈ ವಿಷಯದಲ್ಲಿ ಸಂಶಯಯುಕ್ತನಾದರೆ ಮತ್ಯಾರೂ ಆ ಜೀವನನ್ನು ತಾರಿಸುವದಿಲ್ಲ. ಸದ್ಗುರುವಿನ ಉಪದೇಶವೇನೆಂದರೆ "ಪಾಪ ಕರ್ಮವನ್ನು ಬಿಟ್ಟುಬಿಡು. ಪುಣ್ಯ ಧರ್ಮವನ್ನು ಸ್ವೀಕರಿಸು. ಈಶ್ವರ ಭಜನೆಯ ನಿತ್ಯ ನೇಮವನ್ನು ನಡಿಸು. ಮತ್ತು ಸತ್ಸಂಗದಲ್ಲಿ ಪ್ರೇಮ ಉಳ್ಳವನಾಗು. ಎಲ್ಲಾ ಪ್ರಾಣಿಗಳ ಮೇಲೆ ದಯಾಬುದ್ಧಿಯು ತ್ರಿಕರಣ ಪೂರ್ವಕವಾಗಿ ಇರಲಿ, ದಯಾ ನಿಧಿಯಾದ ಸದ್ಗುರುವನ್ನು ಪ್ರೇಮದಿಂದ ಅಂತರ ಹೃದಯದಲ್ಲಿ ಪೂಜಿಸು. ಇತರರ ದೋಷಗಳನ್ನು ಉಚ್ಚರಿಸಬಾರದು. ಜಗತ್ತಿನೊಳಗೆ ಸ್ವಛ್ಛೆಯಿಂದ ವರ್ತಿಸಬಾರದು. ಎರಡನೇಯವರ ಕುಂದುಗಳನ್ನು ಪ್ರಕಟಿಸಬೇಡ. ಕಾಮಾದಿಗಳನ್ನು ಜಯಿಸು, ಸಂಸಾರ ಕರ್ಮಗಳಲ್ಲಿ ಆಲಸ್ಯ ಭಾವವಿರಲಿ, ಸಂಸಾರದಂಥಾ ಭ್ರಮೆಯ ಕಡೆಗೆ ಲಕ್ಷ್ಯ ಕೊಡದಿರು. ಎಂಥಾ ಸಂಕಟ ಬಂದರೂ ಗುರುಪಾದದಲ್ಲಿ ಪ್ರೇಮವನ್ನು ಬಿಡಬೇಡ. ಧನಪ್ರಾಪ್ತಿಯಾಯಿತೆಂದರೆ

ಮದಹುಟ್ಟಗೊಡಬಾರದು. ಯಾವ ವಿಚಾರ ಮಾಡುವುದರಿಂದ ಮಾಯಾ ಮೋಹವು ಕಳೆದು ಹೋಗುವುದೋ ಅದೇ ವಿಚಾರವನ್ನು ಮಾಡತಕ್ಕದ್ದು. ಜನರು ಕೂಡ ವ್ಯವಹಾರ ಮಾಡುತ್ತಿರುವಾಗ ಹೊರಗೆ ಅದ್ವೈತವನ್ನು ಆಡಬಾರದು, ಆದರೆ ಅಂತಃಕರಣದಲ್ಲಿ ಸರ್ವದಾ ಏಕೋಭಾವವನ್ನು ಹಿಡಿಯತಕ್ಕದ್ದು, ದೇಶ, ಕಾಲ, ಸ್ಥಿತಿ ನೋಡಿಕೊಂಡು, ವೇದವಿಧಿಯುಕ್ತವಾಗಿ ಆಚರಣೆ ಮಾಡತಕ್ಕದ್ದು. ಈಶ್ವರ ಭಕ್ತಿಯನ್ನು ಬಿಟ್ಟು ಅನ್ಯ ಆಚರಣೆ ಮಾಡಬಾರದು. ನಾನು ಯಾರು ಇದ್ದನೆ, ಎಂಬ ಈ ವಿಚಾರವನ್ನು ತನ್ನ ಆಂತರ್ಯದೊಳಗೆ ಚೆನ್ನಾಗೆ ಮಾಡಬೇಕು, ಮತ್ತು ವ್ಯವಹಾರ ರೂಪ ಸಂಸಾರವು ಸ್ವಪ್ನವೆಂದು ತಿಳಿಯತಕ್ಕದ್ದು, ಮಾರಮರ್ದನನಾದ ಆ ಉಮಾರಮಣನನ್ನು ಭಕ್ತಿಭಾವಗಳಿಂದ ಸಂತೋಷಪಡಿಸಿ ಅಕ್ಷಯ ಸುಖದ ಪದವನ್ನು ಪ್ರಾಪ್ತಮಾಡಿಕೊಳ್ಳಬೇಕು". ಸದ್ಗುರುಗಳ ಇಂಥಾ ಸುಬೋಧವನ್ನು ಮನಸ್ಸಿನಲ್ಲಿ ದೃಢವಾಗಿ ಹಿಡಿದು, ಯಾವಾತನು ಸಂಸಾರದಲ್ಲಿ ವರ್ತಿಸುವನೋ, ಆತನ

ಬಂಧವನ್ನು ಹರಿದು, ಸದ್ಗುರುವು ಆತನಿಗೆ ಮುಕ್ತಿಯನ್ನು ಕೊಡುವಂಥವನಾಗುತ್ತಾನೆ. ಹೇ ಶ್ರೋತಾ ಜನರುಗಳಿರಾ, ಅಮೃತಕ್ಕಿಂತ ಅಧಿಕ ಮಧುರವಾದ ಸಿದ್ಧ ಕಥೆಯನ್ನು ಶ್ರವಣ ಮಾಡುವಂಥವರಾಗಿರಿ, ಅಮೃತ ಸೇವನೆಯಿಂದ ಮೋಕ್ಷ ಸಿಗುವದಿಲ್ಲ, ಆದರೆ ಕಥಾಶ್ರವಣದಿಂದ ಅದು ಶೀಘ್ರವಾಗಿ ಪ್ರಾಪ್ತಿಯಾಗುವದು. ಶ್ರೀ ಸಿದ್ಧಾರೂಢ ಸ್ವಾಮಿಯವರು, ಸಿದ್ಧಾಶ್ರಮದಲ್ಲಿರುತ್ತಿರುವಾಗ, ಶಿವರಾತ್ರಿ ಇತ್ಯಾದಿ ಉತ್ಸವಗಳಿಗೆ ಅನ್ಯ ಗ್ರಾಮಗಳಿಂದಲೂ ಭಕ್ತಜನರು ಬರುತ್ತಿದ್ದರು. ಉತ್ಸವವಾದ ನಂತರ ಅವರು ತಿರುಗಿ ತಮ್ಮ ತಮ್ಮ ಗ್ರಾಮಕ್ಕೆ ಹೋದ ಮೇಲೆ ಉತ್ಸವದ ಆನಂದವನ್ನು ಅನುಭವಿಸಿದವರಾಗಿ ಕೆಲವರು ಕೂಡಿ ಆಲೋಚನೆ ಮಾಡುತ್ತಾರೆ - “ನಮ್ಮ ಗ್ರಾಮಕ್ಕೂ ಸದ್ಗುರುಗಳನ್ನು ಕರೆದುಕೊಂಡು ಬಂದು ಹುಬ್ಬಳ್ಳಿಯಲ್ಲಿ ಆದಂಥಾದ್ದೇ ಉತ್ಸವ ಮಾಡಿದ್ದಾದರೆ, ನಾವಾದರೂ, ಗುರುಚರಣ ಸೇವಾ ಘಟಸುವದರಿಂದ ಧನ್ಯರಾಗಿ ಹೋಗುವೆವು', ಎಂದು ಅನ್ನುವರು, ಮುರಕಿಭಾವಿ ಎಂಬ ಗ್ರಾಮದಲ್ಲಿಯೂ ಅನೇಕ

ಗೃಹಸ್ಥರು ಕೂಡಿ, ಈ ಪ್ರಕಾರ ಆಲೋಚನೆ ಮಾಡಿ, ಸದ್ಗುರು ಉತ್ಸವದ್ದೆಶೆಯಿಂದ, ಎಲ್ಲ ತಯಾರಿ ಮಾಡಿಕೊಂಡು, ಸಿದ್ಧಾಶ್ರಮಕ್ಕೆ ಬಂದು ಸದ್ಗುರುಗಳಿಗೆ ವಿಜ್ಞಾಪಿಸುತ್ತಾರೆ - ಶಿವರಾತ್ರಿ ಕಾಲದಲ್ಲಿ ಇಲ್ಲಿ ಯಾವ ಪ್ರಕಾರ ಉತ್ಸವವಾಗುವದೋ ಅದೇ ರೀತಿಯಿಂದ ನಮ್ಮ ಗ್ರಾಮದಲ್ಲಿ ಮಾಡಬೇಕೆಂದು ನಾವು ಇಚ್ಛಿಸುತ್ತೇವೆ. ಆಜ್ಞೆಯಾದರೆ, ತಮ್ಮನ್ನು ಅಲ್ಲಿತನಕ ಕರೆದುಕೊಂಡು ಹೋಗಿ ಮಂಟಪ ಪೂಜಾ ಮಾಡಿ ಆನಂದ ಪಡುವೆವು'. ಅವರನ್ನು ಕುರಿತು ಸಿದ್ಧರು ಅನ್ನುತ್ತಾರೆ- "ಕೇಳಿರ್ರೆಯ್ಯಾ ಭಕ್ತ ಜನರುಗಳಿರಾ, ನಾವು ಹುಬ್ಬಳ್ಳಿಯನ್ನು ಬಿಟ್ಟು ಬರುವದಿಲ್ಲ. ಯಾಕೆಂದರೆ, ಇಲ್ಲಿ ನಿತ್ಯದಲ್ಲಿಯೂ ದರ್ಶನಕ್ಕೋಸ್ಕರ ಬರುವಂಥ ಭಕ್ತರಿಗೆ ನಿರಾಶೆಯಾಗುವದು. ನೀವು ಎಲ್ಲೆಲ್ಲಿ ಭಜನೆ, ಬ್ರಹ್ಮಜಿಜ್ಞಾಸ, ವೇದಾಂತ ಶ್ರವಣ ಮುಂತಾದವುಗಳನ್ನು ನಡಿಸುವಿರೋ ಅಲ್ಲಲ್ಲಿ ಸದ್ಗುರುವು ನಿಶ್ಚಯವಾಗಿ ಇರುತ್ತಾನೆ. ಇದನ್ನು ದೃಢವಾಗಿ ನಂಬಿ ಕಾರ್ಯವನ್ನು ನಡಿಸಿರಿ," ಎಂಬ ಸಿದ್ಧರ ವಚನವನ್ನು ಕೇಳಿ, ಆ ಭಕ್ತ ಜನರೆಲ್ಲಾ ಆನಂದಭಭರಿತರಾಗಿ,

ಸದ್ಗುರುನಾಥನ ಭಾವಚಿತ್ರವನ್ನು ಮಂಟಪದೊಳಗೆ ಪೂಜಾಗೋಸ್ಕರ ಇಡುವಂಥವರಾದರು. ಆ ಭಕ್ತರು ಸಿದ್ಧಾರೂಢರ ಶಿಷ್ಯನಾದ ರಾಮಸ್ವಾಮಿ ಎಂಬವನಿಗೆ ಪೂಜಾ ಮಾಡುವದಕ್ಕೋಸ್ಕರ ಮುರಕಿಭಾವಿಗೆ ಕರೆದುಕೊಂಡು ಹೋದರು. ಆಗ, ದೇಶದಲ್ಲೆಲ್ಲಾ ಭಕ್ತ ಜನರಿಗೆ ಆಮಂತ್ರಣ ಪತ್ರಗಳನ್ನು ಕಳುಹಿಸಿದರು. ಆಮಂತ್ರಣ ಪತ್ರಗಳಲ್ಲಿ, ಸಿದ್ದಾರೂಢ ಸದ್ಗುರುಗಳು ಸ್ವತಃ ಬಂದು ಪೂಜಾ ಕೈಕೊಳ್ಳುವರೆಂದು, ಉಲ್ಲೇಖನ ಮಾಡಿತ್ತು. ಸಿದ್ಧಾರೂಢರು ಹುಬ್ಬಳ್ಳಿ ಊರು ಬಿಟ್ಟು ಮತ್ತೆಲ್ಲಿಯೂ ಹೋಗುವುದಿಲ್ಲವೆಂಬುದು ಎಲ್ಲರೂ ತಿಳಿದಿದ್ದರಿಂದ, ಏನೋ ಚಮತ್ಕಾರವಿರುವದೆಂದು, ಎಲ್ಲರೂ ಉತ್ಸವಕ್ಕೆ ಬರುವಂಥವರಾದರು. ಅಪಾರ ಜನರು ಕೂಡಿದರು. ಎಲ್ಲ ಭೋಜನ ಉಪಚಾರಕ್ಕೋಸ್ಕರವಾಗಿ ಬೇಕಾದಷ್ಟು ಸಾಮಗ್ರಿ ತಯಾರಿಸಿ ಇಟ್ಟಿತು. ವಿಸ್ತಾರ ಪ್ರದೇಶದಲ್ಲಿ ಒಂದು ಭವ್ಯವಾದ ಹಂದರ ಹಾಕಿಸಿ, ಅದರೊಳಗೆ ದಿವ್ಯ ಮಂಟಪವನ್ನು ನಿಂದಿರಿಸಿ, ಅದರ ಮಧ್ಯಭಾಗದಲ್ಲಿ ಸುಂದರ ಸಿಂಹಾಸನದ ಮೇಲೆ ಸದ್ಗುರುರಾಯನು

ಚಿತ್ರರೂಪದಿಂದ ಆಸೀನನಾಗಿದ್ದನು. ಏಳುದಿವಸಗಳ ತನಕ ಉತ್ಸವ ನಡೆಯುತ್ತಿರುವದು.ಅಹೋರಾತ್ರಿ ಭಜನೆಯ ಘೋಷ ನಡೆಯುತ್ತಿದ್ದು, ಎರಡು ಹೊತ್ತು ಕೀರ್ತನ ಸಮಾರಂಭವು ಆಗುತ್ತಿತ್ತು. ದೇಶ ದೇಶಗಳಿಂದ ಬಂದಂಥಾ ಸಾಧು ಸತ್ಪುರುಷರು ನಿತ್ಯದಲ್ಲಿಯೂ ವೇದಾಂತಚರ್ಚಾ ಉಪನ್ಯಾಸಾದಿಗಳನ್ನು ನಡೆಸುತ್ತಿದ್ದರು. ಈ ರೀತಿಯಿಂದ ಆಸ್ಥಾನವು ಸಾಕ್ಷಾತ್ ಕೈಲಾಸವೆಂಬಂತೆ ತೋರುತ್ತಿತ್ತು. ಮಧ್ಯಾನ್ಹ ಕಾಲದಲ್ಲಿ ಎಲ್ಲಾ ಜನರನ್ನು ಭೋಜನಕ್ಕೆ ಕರೆಯುತ್ತಿದ್ದರು. ಮತ್ತು ರಾತ್ರಿ ಕಾಲದಲ್ಲಿ, ಸರ್ವರಿಗೂ ಊಟ ಹಾಕಿಸಿ ತೃಪ್ತಿಪಡಿಸುತ್ತಿದ್ದರು. ಏಳು ದಿವಸಗಳ ತನಕ ನಿತ್ಯ ಸಂಧ್ಯಾಕಾಲದಲ್ಲಿ ದೀಪ ಹಚ್ಚುತ್ತಲೇ ಮಂಟಪದಲ್ಲಿ ಸದ್ಗುರು ಮೂರ್ತಿಯನ್ನು ದಿವ್ಯಾಲಂಕಾರಗಳಿಂದ ಭೂಷಿಸಿ, ಆಮೇಲೆ ಆನಂದದಿಂದ ಆರತಿಯನ್ನು ಬೆಳಗುತ್ತಿದ್ದರು. ಅಸಂಖ್ಯ ಜನರು ಆ ಸಮಯದಲ್ಲಿ ಆ ಸಮಾರಂಭವನ್ನು ನೋಡುತ್ತಾ ನಾಮಘೋಷ ಮಾಡಿ, ಮಂಗಳಾರತಿಯನ್ನು ಹಾಡುತ್ತಿದ್ದರು. ಆ ಸಮಯದಲ್ಲಿ ಕೆಲವರು ಅನ್ನುತ್ತಾರೆ, "ಉತ್ಸವಕ್ಕೆ ಶ್ರೀ

ಸಿದ್ಧಾರೂಢರು ಬರುವವರೆಂದು ನಮಗೆ ಹೇಳಿತ್ತು, ಆದರೆ ಆತನನ್ನು ಇಲ್ಲಿ ಯಾರೂ ನೋಡಲಿಲ್ಲ,ಸುಳ್ಳೇ ಆಮಂತ್ರಣ ಪತ್ರದಲ್ಲಿ ಹಾಗೆ ಬರೆದಿತ್ತು ". ಆಗ ಭಾವಿಕ ಜನರು ಇದನ್ನು ಕೇಳಿ ಅನ್ನುತ್ತಾರೆ - 'ಸದ್ಗುರುಗಳು ಕಡೇ ದಿವಸ ಬರುವವರು." ಈ ವಚನವನ್ನು ಕೇಳಿ, ಎಲ್ಲರೂ ಕಡೆಯ ದಿವಸದ ತನಕ ಇರುವಂಥವರಾದರು. ನಿತ್ಯವೂ ಚಿತ್ರದ ಪೂಜಾ ಆಗುತ್ತಿತ್ತು. ಏಳನೇ ದಿವಸವು ಪ್ರಾಪ್ತವಾಯಿತು. ಆ ದಿವಸ ಸದ್ಗುರುಗಳು ಬರುವವರೆಂಬ ವರ್ತಮಾನ ಕೇಳಿ, ಅಸಂಖ್ಯ ಜನರು ಬಂದರು. ಸಂಧ್ಯಾಕಾಲದಲ್ಲಿ ಜನ ಸಂದಣಿಯು ಹಂದರದಲ್ಲಿ ತುಂಬಿತ್ತು. ಆದರೆ ಸದ್ಗುರುಗಳು ಬಂದದ್ದು ಯಾರಿಗೂ ಕಾಣಲಿಲ್ಲ. ಆ ಸಮಯದಲ್ಲಿ ರಾಮಯ್ಯ ಸ್ವಾಮಿಯು ಪೂಜಾ ಮಾಡಲಿಕ್ಕೆ ಸಿದ್ಧನಾದನು. ದೇವರ ಮುಂದೆ ಪರದೆಯನ್ನು ಹಿಡಿದು, ಭಕ್ತ ಜನರನ್ನು ಕೂಡಿಕೊಂಡು, ಅಲಂಕಾರ ಮಾಡಲಿಕ್ಕೆ ಆರಂಭಿಸಿದನು. ಸಿದ್ಧರಾಜನು ಇನ್ನೂ ತನಕ ಬಂದಿಲ್ಲವೆಂದು ಅವರೆಲ್ಲರಿಗೂ ಮನಸ್ಸಿನಲ್ಲಿ ಬಹಳ ಚಿಂತೆ ಉತ್ಪನ್ನವಾಯಿತು. ಪೂಜಾ ಎಲ್ಲಾ ಸಿದ್ಧಮಾಡಿ ರಾಮಯ್ಯ ಸ್ವಾಮಿಯು ಸದ್ಗುರುವಿಗೆ

ಪ್ರಾರ್ಥಿಸುವಂಥವನಾಗುತ್ತಾನೆ. - “ಹೇ ಸಿದ್ಧ ಸದ್ಗುರುರಾಯನೇ ನಿನಗೆ ಜಯಜಯಕಾರವಿರಲಿ, ಭಕ್ತಸಖನೇ, ಬೇಗನೇ ಪ್ರಾಪ್ತನಾಗು. ನಿನ್ನ ದರ್ಶನೆದ್ದೇಶೆಯಿಂದ ಬಹು ಕುತೂಹಲಪಟ್ಟು ಅಸಂಖ್ಯ ಜನರು ಬಂದಿರುವರು. ನೀನು ಈ ಸಮಯದಲ್ಲಿ ಬಂದಿಲ್ಲವಾದರೆ ಈ ನಾಚಿಕೆ ಯಾರಿಗೆ ಆಗುತ್ತದೆ. ನೀನು ಈ ದಿನ ಇಲ್ಲಿಗೆ ಬರುವಿ ಎಂದು ಲೋಕದಲ್ಲಿ ವಾರ್ತೆಯಾಗಿರುತ್ತದೆ. ನೀನು ಬಾರದ್ದು ನೋಡಿ, ನಿನ್ನ ಭಕ್ತರಾದ ನಮ್ಮನ್ನು ಕುರಿತು, ಎಲ್ಲರೂ ಹಾಸ್ಯ ಮಾಡುವರು. ಇದು ನೀನು ತಿಳಿದಿರುವಿ. ವಿಷಯಗಳನ್ನು ಪ್ರಾರ್ಥಿಸುವವರಿಗೆ ಅವನ್ನು ನೀನು ಶೀಘ್ರವಾಗಿ ಕೊಡುವಿ, ಆದರೆ, ಅಂತಾ ವಿಷಯಗಳನ್ನು ನಾವು ನಿನಗೆ ಬೇಡದೆ, ಲೋಕಹಿತಾರ್ಥವಾಗಿ, ನೀನು ಇವತ್ತಿನ ದಿವಸ, ಇಲ್ಲಿ ಎಲ್ಲರಿಗೂ ಪ್ರತ್ಯಕ್ಷವಾಗಿ ಕಾಣಿಸಿಕೊಳ್ಳಬೇಕೆಂಬುವದನ್ನೇ ನಾವು ಇಚ್ಛಾ ಮಾಡುತ್ತೇವೆ. ದಿವಸ, ನಿನ್ನ ದರ್ಶನವಾಗುವದರಿಂದ, ಎಲ್ಲಾ ಜನರಿಗೂ ಅತ್ಯಂತ ಆನಂದ ಉಂಟಾಗುವದು ಮತ್ತು ನಿನ್ನ ಮೇಲೆ ಅವರ ಭಕ್ತಿಯು

ವಿಶೇಷವಾಗಿ ಬೆಳೆಯುವುದು. ಇದೇ ನಮ್ಮ ಹೇತುವಾಗಿರುವದು. ಇದಕ್ಕೋಸ್ಕರವಾಗಿಯೇ ನಿನ್ನ ಅವತಾರವಿರುತ್ತದೆ- ಸದ್ಗುರು ಭಕ್ತಿಯನ್ನು ಸರ್ವತ್ರದಲ್ಲಿಯೂ ಪಸರಿಸಿ, ಜನರನ್ನು ಪವಿತ್ರಮಾಡಿ, ಆ ಮೂಲಕ ಅವರನ್ನು ಉದ್ಧಾರ ಮಾಡಬೇಕು. ಇದೆ ಹೇತುವಿನಿಂದಲೇ ಈ ಉತ್ಸವವಾದರೂ ಆರಂಭಿಸಿತ್ತು, ಈಗ ಅಸಂಖ್ಯ ಜನರು ನಿನ್ನ ದರ್ಶನೋತ್ಸುಕರಾಗಿ ಬಂದಿರುವರು. ನೀನು ಅವರಿಗೆ ಈಗ ಪ್ರತ್ಯಕ್ಷ ದರ್ಶನ ಕೊಟ್ಟಿದ್ದಾದರೆ ಈ ಮಹೋತ್ಸವವು ? ಸಾರ್ಥಕವಾಗುವದು. ನೀನು ಒಂದು ವೇಳೆ ನನ್ನ ಪ್ರಾರ್ಥನೆಯನ್ನು ಮನ್ನಿಸದಿದ್ದರೆ, ನಿನ್ನ ಭಕ್ತರ ವಚನಕ್ಕೆ ಅಸತ್ಯತ್ವದ ದೋಷ ಬರುವುದು. ಈ ನಾಚಿಕೆಯು, ಭಕ್ತಾಭಿಮಾನಿಯಾದ ನಿನ್ನ ಹೊರತು ಮತ್ಯಾರಿಗೆ ಇರುವುದು?' ಈ ಪ್ರಕಾರ ಈ ಪ್ರಾರ್ಥಿಸಿ, ತತ್ಕ್ಷಣವೇ ಪರದೆಯನ್ನು ತೆಗೆದರು. ಎಲ್ಲ ಜನರು ನೋಡುತ್ತಿರುವಾಗ, ಏನು ಚಮತ್ಕಾರವಾಯಿತೆಂದರೆ, ಪ್ರತ್ಯಕ್ಷ ಸದ್ಗುರುನಾಥನೇ ಸರ್ವಾಲಂಕಾರದಿಂದ ಮಂಡಿತನಾಗಿಯೂ,

ಪ್ರಕಾಶಮಾನವಾದ ಮುಖಕಮಲ ಉಳ್ಳವನಾಗಿಯೂ, ಸುತ್ತಲೂ ಅದ್ಭುತವಾದ ತೇಜವನ್ನು ಕೂಡಿಕೊಂಡಂಥವನಾಗಿಯೂ, ಸಿಂಹಾಸನದ ಮೇಲೆ ವಿರಾಜಮಾನವಾಗಿರುವದನ್ನು ಸರ್ವರೂ ನೋಡುವಂಥವರಾದರು. ಒಂದು ಕ್ಷಣ ಮಾತ್ರ ಎಲ್ಲರಿಗೂ ಸದ್ಗುರುನಾಥನು ಕಾಣಿಸಿಕೊಂಡನು. ಆ ಸಮಯದಲ್ಲಿ ಹ್ಯಾಗೆ ಸಮುದ್ರವು ಉಕ್ಕೇರಿ ಬರುವುದೋ, ಅಥವಾ ವರ್ಷಕಾಲದಲ್ಲಿ ಮೇಘವು ಗರ್ಜಿಸುವದೋ ಆ ರೀತಿಯಿಂದ ಆ ಸಭಾದೊಳಗೆ ಉತ್ಸಾಹವಾಯಿತು. ಸಿದ್ಧ ಸದ್ಗುರುವು ಪ್ರಕಟವಾದಾಗ ಜನರೊಳಗೆ ಹುಟ್ಟಿದ ಆನಂದವು, ಅದು ಎಷ್ಟೆಂತ ವರ್ಣಿಸಲಸಾಧ್ಯವು, ಸದ್ಗುರುವನ್ನು ನೋಡಿ, ಜನರು ಅತ್ಯಂತ ಮೋದದಿಂದ ಕುಣಿಯಲಾರಂಭಿಸಿದರು. ಅನ್ನುತ್ತಾರೆ- “ನಾವು ಧನ್ಯರು ಧನ್ಯರು. ಆ ದಯಾಘನನಾದ ಸಿದ್ಧನನ್ನು ಇಲ್ಲೇ ಕಂಡೆವು. ಆ ಸದ್ಗುರುನಾಥನು ಎಲ್ಲಾ ಸ್ಥಳದಲ್ಲಿಯೂ ವ್ಯಾಪಕನಾಗಿರುವನೆಂದು, ಈಗ ಪೂರ್ಣವಾಗಿ ನಾವು ತಿಳಿದೆವು. ನಾವು ಯಾತಕ್ಕೆ ಇತರ ದೇವರಿಗೆ ಹೋಗಬೇಕು.

ಸಿದ್ಧನ ಹತ್ತಿರ ತತ್ಕಾಲವೇ ದರ್ಶನವು. ಇದನ್ನು ತಿಳಿಯದೆ ನಾವು ಇಷ್ಟು ದಿನ ವ್ಯರ್ಥವಾಗಿ ನಾಲ್ಕೂ ಕಡೆಗೆ ಓಡಾಡಿದೆವು". ಎಲ್ಲಾ ಜನರು ಆನಂದಭರಿತರಾದರು. ಎಲ್ಲರ ಹೃದಯದಲ್ಲಿ ಆ ಸಿದ್ಧಮೂರ್ತಿಯು ಸ್ಥಿರವಾಗಿ ನಿಲ್ಲುವಂಥಾದ್ದಾಯಿತು. ಆ ಕ್ಷಣವೇ ಸದ್ಗುರುಮೂರ್ತಿಯು ಅದೃಶ್ಯವಾಯಿತು. ಇಲ್ಲಿಗೆ ಆ ಮಹೋತ್ಸವವು ಸಂಪೂರ್ಣವಾಯಿತು. ಇಂಥಾ ಭಕ್ತಾಭಿಮಾನಿಯಾದ ಸದ್ಗುರುವು ಲೋಕಹಿತಕ್ಕಾಗಿ ಇರುವಂಥಾ ಕಾರ್ಯಕ್ಕೆ ಸಾಹ್ಯವಾಗುತ್ತಾನೆ. ಯಾಕೆಂದರೆ ಭಕ್ತೋದ್ಧಾರಾರ್ಥವಾಗಿಯೇ ಆತನು ಅವತಾರವನ್ನು ಧಾರಣ ಮಾಡಿರುತ್ತಾನೆ. ಈ ಪವಿತ್ರವಾದ ಕಥೆಯನ್ನು ಆದರದಿಂದ ಯಾರು ಶ್ರವಣ ಮಾಡುವರೋ ಅವರ ಮೇಲೆ ಸದ್ಗುರುವು ಕೃಪೆ ಮಾಡಿ, ದುರ್ಧರವಾದ ಅವರ ಭವಪಾಶವನ್ನು ಕ್ಷಣದಲ್ಲಿ ಹರಿದು ಬಿಡುವನು. ಶ್ರೋತಾ ಜನರು ಈ ಅತ್ಯಂತ ಮನೋಹರವಾದ ಕಥೆಯನ್ನು ಶ್ರವಣ ಮಾಡಿದರು. ಈಗ ಕಥೆಯ ಸಾರರೂಪವಾಗಿರುವ ಅಧ್ಯಾತ್ಮ ವಿಚಾರವು ತಿಳಿಯತಕ್ಕದ್ದಾಗಿರುತ್ತದೆ. ಪರಮಾರ್ಥದಲ್ಲಿ ಸಾಧಕರು

ಬ್ರಹ್ಮದ ಅಪರೋಕ್ಷಾನುಭವವು ಆಗಬೇಕು.ಎಂದು ಯಾವಾಗಲೂ ಇಚ್ಚೆಸುತ್ತಾರೆ. ಅದಕ್ಕೋಸ್ಕರವಾಗಿ ಸದ್ಭಾವದಿಂದ ಸದ್ಗುರುಗಳಿಗೆ ಶರಣು ಹೋಗುವರು. ಮತ್ತು ಸದ್ಗುರುಗಳು ಅವರ ಮನೋರಥವನ್ನು ಪೂರೈಸುವರು. ಸದ್ಗುರುವನ್ನು ಪ್ರತ್ಯಕ್ಷ ನೋಡುವುದಕ್ಕೆ ಸಾಕ್ಷಾತ್ಕಾರವೆನ್ನುತ್ತಾರೆ. ಹೃದಯದಲ್ಲಿ ಸದ್ಗುರುವಿನಲ್ಲಿ ಐಕ್ಯತ್ವವನ್ನು ಹೊಂದುವದೇ ಅಪರೋಕ್ಷ ಅನುಭವವೆನ್ನುತ್ತಾರೆ. ಸದ್ಗುರುವೇ ನಿರ್ಗುಣ ಬ್ರಹ್ಮವು, ಭಕ್ತರ ಸಲುವಾಗಿ ಆತನು ಸಗುಣರೂಪದಿಂದ ಕಾಣಿಸಿಕೊಳ್ಳುವುನು . ನೀರು ಮತ್ತು ಬರ್ಫ ಒಂದೇ ಆಗಿರುವವು. ಹಾಗೆಯೇ ನಿರ್ಗುಣ ಮತ್ತು ಸಗುಣ ಏಕವಾಗಿರುವವು. ಕೆಲವರನ್ನುವರು- “ನಾವು ಸದ್ಗುರುಗಳನ್ನು ಕಣ್ಣಿನಿಂದ ನೋಡಿದ ಮಾತ್ರದಿಂದ ನಮಗೆ ಕೂಡಲೇ ಯಾಕೆ ಜ್ಞಾನವಾಗುವದಿಲ್ಲ ?" ಅಂದರೆ ಘಟಾದಿಗಳನ್ನು ಕಂಡಂತೆ ದ್ವೈತಭಾವದಿಂದ ಕಂಡದ್ದಾದರೆ ಜ್ಞಾನವು ಎಂದು ಆಗಲಾರದು. ಐಕ್ಯಭಾವದಿಂದ ನೋಡಿದ ವಿನಹಾ ಆತ್ಮಜ್ಞಾನವಾಗಲಾರದು. ಆತ್ಮಜ್ಞಾನವೇ

ಜ್ಞಾನವೆನ್ನಲ್ಪಟ್ಟು, ಅದರ ವಿನಹಾ ಭವಬಂಧನವು ಕಲ್ಪಾಂತರ ತನಕ ಕಳೆಯಲಾಗದು, ಹೇ ಶ್ರೋತಾ ಜನರುಗಳಿರಾ, ಮುಂದಿನ ಅಧ್ಯಾಯದಲ್ಲಿರುವ ಸುರಸ ಕಥೆಯನ್ನು ಶ್ರವಣ ಮಾಡುವಂಥವರಾಗಿರಿ. ಅದನ್ನು ಕೇಳಿದ ಮಾತ್ರದಿಂದ ಎಲ್ಲಾ ಕಲಿಮಲವು ದಹನವಾಗಲ್ಪಟ್ಟು, ಗುರುಕೃಪೆಯು ಸಂಪಾದಿಸಲ್ಪಡುತ್ತದೆ. ಎಂಬಲ್ಲಿ, ಶ್ರೀ ಸಿದ್ಧಾರೂಢ ಕಥಾಮೃತದೊಳ್, ಶ್ರವಣ ಮಾತ್ರದಿಂದ ಸರ್ವ ಪಾಪಗಳನ್ನು ಭಸ್ಮ ಮಾಡುವಂಥ ಸುರಸವಾದ ಈ ಇಪ್ಪತ್ತೆರಡನೇ ಅಧ್ಯಾಯವನ್ನು ಶಿವದಾಸನು ಶ್ರೀ ಸದ್ಗುರು ಸಿದ್ಧಾರೂಢರ ಚರಣಾರವಿಂದಗಳಲ್ಲಿ ಅರ್ಪಿಸುತ್ತಿರುವನು.